ಕ್ರೂಸ್ 'ಲೈನರ್ ಆ್ಯಂಗ್ರಿಯಾ' ಈಗ ದೇಸಿ ಪ್ರವಾಸಿಗರ ಪಾಲಿನ ಪ್ರಮುಖ ಆಕರ್ಷಣೆಗಳಲ್ಲೊಂದಾಗಿದೆ. ಕ್ರೂಸ್ ಪ್ರವಾಸದ ಮೂಲ ಉದ್ದೇಶವೇ ನೀರಿನಾಳದ ಸೊಬಗನ್ನು ಪ್ರವಾಸಿಗರಿಗೆ ತೋರಿಸುವುದಾಗಿದೆ. ಮುಂಬೈನಿಂದ ಗೋವಾದ ಪ್ರಯಾಣವನ್ನು ಹೆಚ್ಚು ವಿನೋದ ಮತ್ತು ಐಷಾರಾಮಿಯಾಗಿಸಿರುವ 'ಮುಂಬೈ–ಗೋವಾ ಕ್ರೂಸ್ ಲೈನರ್ ಆ್ಯಂಗ್ರಿಯಾ' ಕಳೆದ ಅಕ್ಟೋಬರ್‌ನಿಂದ ತನ್ನ ಕಾರ್ಯಾಚರಣೆ ಆರಂಭಿಸಿದೆ. ಈ ವಿಹಾರ ನೌಕೆ ವಿಶೇಷ ವಿನ್ಯಾಸದೊಂದಿಗೆ ಜಪಾನ್‌ನಲ್ಲಿ ರೂಪುಗೊಂಡಿದೆ. ಮುಂಬೈನಿಂದ ಗೋವಾಕ್ಕೆ ಪ್ರಯಾಣ ಮಾಡಲು ಒಟ್ಟು ಹದಿನಾಲ್ಕು ಗಂಟೆಗಳ ಕಾಲಾವಧಿ. ಸದ್ಯಕ್ಕೆ ಇದು ತಡೆರಹಿತ ಪ್ರಯಾಣವಾಗಿದ್ದು – ದಿಘಾಯಿ, ದಾಬೋಲ್, ಮಲ್ವಾನ್ ಮತ್ತು ಕೊಂಕಣ ತೀರಗಳಲ್ಲಿ ಜೆಟ್ಟಿಯ ಕಾಮಗಾರಿ ಪೂರ್ಣಗೊಂಡ ನಂತರದಲ್ಲಿ ಈ ಪ್ರದೇಶಗಳಲ್ಲಿ ಹಡಗಿಗೆ ನಿಲುಗಡೆಯನ್ನು ನೀಡುವ ಕುರಿತು ಚಿಂತಿಸಲಾಗುತ್ತಿದೆ.

## ಸೂರ್ಯೋದಯ-ಸೂರ್ಯಾಸ್ತದ ಸೊಬಗು

ಸಮುದ್ರದ ನಡುವೆ ಸೂರ್ಯೋದಯ ಮತ್ತು ಸೂರ್ಯಾಸ್ತದ ಅಭೂತಪೂರ್ವವಾದ ಸೌಂದರ್ಯವನ್ನು ಆನಂದಿಸಲು ಪ್ರವಾಸಿಗರಿಗೆ ಅವಕಾಶವನ್ನು ಮಾಡಿಕೊಡಲಾಗಿದೆ. ಇದರ ಸಲುವಾಗಿಯೇ ಹಡಗಿನ ಡೆಕ್‌ನಲ್ಲಿ ವಿಶೇಷವಾಗಿ ವೀಕ್ಷಣಾ ಸೌಲಭ್ಯವನ್ನು ಪ್ರವಾಸಿಗರಿಗೆ ಒದಗಿಸಲಾಗಿದೆ. ಈ ನೌಕೆಯಲ್ಲಿ ಒಟ್ಟಿಗೇ ಏಕಕಾಲದಲ್ಲಿ ನಾಲ್ಕು ಸಾವಿರ ಮಂದಿ ಪ್ರಯಾಣಿಕರು ಪ್ರಯಾಣಿಸಬಹುದಾಗಿದ್ದು, ವಿವಿಧ ದರ್ಜೆಯ ಒಟ್ಟು 104 ಕೊಠಡಿಗಳಿವೆ.

ನೌಕೆಯ ಒಳಭಾಗದಲ್ಲಿ ಬಾರ್, ರೆಸ್ಟೋರೆಂಟುಗಳು, ಈಜುಕೊಳ, ಸ್ಪಾ ಮತ್ತು ಡಿಸ್ಕೋಥೆಕ್ ಹೊಂದಿರುವ ದೇಶದ ಪ್ರಥಮ ಐಷಾರಾಮಿ ಹಡಗೆಂದು ಇದನ್ನು ಬಣ್ಣಿಸಲಾಗುತ್ತಿದೆ. ಕ್ರೂಸ್ ಲೈನರ್ ಆ್ಯಂಗ್ರಿಯಾ ನೌಕೆಯು 2 ಶಕ್ತಿಶಾಲಿ ಫೈಲ್ ಸ್ಟಿಕ್ 18 ಪಿ.ಸಿ 2–6 ಇಂಜಿನ್‌ಗಳಿಂದ 27 ಸಾವಿರ ಬಿಎಚ್‌ಪಿ ಶಕ್ತಿಯನ್ನು ಉತ್ಪಾದಿಸುವುದರೊಂದಿಗೆ, ಗಂಟೆಗೆ ಇಪ್ಪತ್ತೈದು ನಾಟಿಕಲ್ ಮೈಲ್ ವೇಗವನ್ನು ತಲುಪುವ ಸಾಮರ್ಥ್ಯವನ್ನು ಹೊಂದಿದೆ.

ಈ ನೌಕೆಯ ಒಟ್ಟು ಉದ್ದ 131 ಮೀಟರ್. ಇಡೀ ಹಡಗಿನಲ್ಲಿ ಒಂದು ಸುತ್ತು ತಿರುಗಿ ಬಂದರೆ ಒಟ್ಟು 4 ಕಿ.ಮೀ. ಕ್ರಮಿಸಿದಂತೆ ಆಗುತ್ತದೆ. ಈ ನೌಕೆಯ ಪ್ರಯಾಣದ ಸಂದರ್ಭದಲ್ಲಿ ಪ್ರತಿ ವ್ಯಕ್ತಿಗೆ 2 ಸಾವಿರ ರೂಪಾಯಿ ವೆಚ್ಚದಲ್ಲಿ ಚಹಾ, ಜ್ಯೂಸ್, ತಿಂಡಿ, ಮಧ್ಯಾಹ್ನದ ಭೋಜನ ಮತ್ತು ಉಪಹಾರಗಳನ್ನು ಪ್ರವಾಸಿಗರಿಗೆ ಸಂಸ್ಥೆಯು ನೀಡುತ್ತದೆ. ಈ ನೌಕೆಯಲ್ಲಿ ದಿನದ ಎಲ್ಲ ಸಮಯದಲ್ಲಿಯೂ ತೆರೆದಿರುವ ಬಾರ್ ಮತ್ತು ರೆಸ್ಟೋರೆಂಟ್‌ಗಳಿವೆ.

ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕದ ಕರಾವಳಿ ಮತ್ತು ಪ್ರಾದೇಶಿಕವಾದ ಹಲವಾರು ತಿನಿಸುಗಳನ್ನು ಇಲ್ಲಿ ನೀಡಲಾಗುತ್ತದೆ. ಜಾಗತಿಕ ಆಹಾರವನ್ನೂ ಪ್ರವಾಸಿಗರ ಅಭಿರುಚಿಗೆ ಅನುಗುಣವಾಗಿ ಒದಗಿಸುವ ವ್ಯವಸ್ಥೆಯನ್ನು ವಿಶೇಷವಾಗಿ ಮಾಡಲಾಗಿದೆ.







## ತುದಿಮೊದಲಿಲ್ಲದ ಮನರಂಜನೆ

ಈ ನೌಕೆಯ ಒಳಗಡೆ ಸಂಗೀತ ಮತ್ತು ನೃತ್ಯ (ಡಿಸ್ಕೋಥೆಕ್), ಈಜುಕೊಳ, ಸ್ಪಾ, ಓದುವಿಕೆಗೆ ವಾಚನಾಲಯ ಮತ್ತು ವಿಶೇಷವಾದ ಮನರಂಜನಾ ಕೊಠಡಿ, ಚಿತ್ರದ ಗ್ಯಾಲರಿ, ಚಲನಚಿತ್ರ ಮಂದಿರಗಳ ಸೌಲಭ್ಯವನ್ನು ಒದಗಿಸಲಾಗಿದೆ. ಸ್ಪಾ ಮತ್ತು ಡಿಸ್ಕೋಥೆಕ್ ಅನ್ನು ಪ್ರವಾಸಿಗರು ಮುಂಚಿತವಾಗಿ ಬುಕ್ಕಿಂಗ್ ಮಾಡಿಸಿದರಷ್ಟೇ ಅವುಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಈಜುಕೊಳಗಳು, ಬಾರ್, ರೆಸ್ಟೋರೆಂಟ್, ವಾಚನಾಲಯ ಮತ್ತು ವಿವಿಧ ರೀತಿಯ ಅಂಗಡಿಗಳಿಗೆ ಪ್ರವಾಸಿಗರು ಉಚಿತವಾಗಿ ಪ್ರವೇಶಿಸಬಹುದಾಗಿದೆ. ಮದ್ಯ ಪೂರೈಸುವ ಪ್ರದೇಶಗಳಲ್ಲಿ ಮತ್ತು ಗಾಜ್ ಡೆಕ್ ಒಳಗೆ ಮಕ್ಕಳಿಗೆ ಪ್ರವೇಶಕ್ಕೆ ಅನುಮತಿ ಇರುವುದಿಲ್ಲ.

ಈ ನೌಕೆಯು ಮುಂಬೈನಿಂದ ಸಂಜೆ 4ಕ್ಕೆ ಹೊರಟು ಮಾರನೇ ದಿನ ಬೆಳಗ್ಗೆ 9ಕ್ಕೆ ಗೋವಾವನ್ನು ತಲುಪುತ್ತದೆ. ಅದೇ ರೀತಿ ಗೋವಾದಿಂದ ಸಂಜೆ 4ಕ್ಕೆ ಹೊರಟು ಮುಂಬಯಿಗೆ ಬೆಳಿಗ್ಗೆ 9ಕ್ಕೆ ತಲುಪುತ್ತದೆ. ಈ ನೌಕೆಯಲ್ಲಿ ಪ್ರಯಾಣ ದರ ರೂ. 4,300ರಿಂದ ಆರಂಭವಾಗುತ್ತದೆ. ಊಟದ ಮೊತ್ತ ಪ್ರತ್ಯೇಕ. ಆಫ್ ಸೀಸನ್‌ಗಳಲ್ಲಿ ಈ ನೌಕೆಯ ಪ್ರಯಾಣ ಮತ್ತಷ್ಟು ದುಬಾರಿಯಾಗಿರುತ್ತದೆ ಹಾಗೂ ಈ ನೌಕೆಯಲ್ಲಿ ಪ್ರಯಾಣ ಮಾಡಲು ಇಚ್ಛಿಸುವ ಪ್ರವಾಸಿಗರು ಸಮೀಪದ ಟ್ರಾವೆಲ್ ಏಜೆಂಟರುಗಳು ಅಥವಾ ಕ್ರೂಸ್‌ನ ವೆಬ್‌ಸೈಟ್ ಮೂಲಕವೂ ಟಿಕೆಟ್ ಬುಕ್ಕಿಂಗ್ ಮಾಡಬಹುದು.

ಆಳ ಸಮುದ್ರದ ಪ್ರಯಾಣವು ಕೇವಲ ವಿದೇಶಗಳಲ್ಲಿ ಮಾತ್ರ ಲಭ್ಯ ಎಂದು ಪರಿತಪಿಸುತ್ತಿದ್ದ ಸಾಹಸಿ ಹಾಗೂ ವಿನೋದ ಸ್ವಭಾವದ ಪ್ರವಾಸಿಗರಿಗೆ ಕ್ರೂಸ್ ಲೈನರ್ ಆ್ಯಂಗ್ರಿಯಾ ಸಂಸ್ಥೆಯು ಈಗ ಭಾರತದಲ್ಲೇ ಅವಕಾಶ ಕಲ್ಪಿಸಿದೆ. ಇದು ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಲ್ಲಿ ನಿಜಕ್ಕೂ ಉತ್ತಮವಾದ ಬೆಳವಣಿಗೆ. ಕ್ರೂಸ್ ಪ್ರವಾಸ ಸಮುದ್ರದೊಳಗಿನ ವಿವಿಧ ಆಯಾಮಗಳು, ಜೀವ ವೈವಿಧ್ಯ ಹಾಗೂ ಅಲ್ಲಿನ ವಾತಾವರಣವನ್ನು ಅರಿಯುವ ದೃಷ್ಟಿಯಿಂದಲೂ ಮುಖ್ಯವಾದುದು.